## ಯಾರೀ ಶ್ರೀನಿವಾಸ ಮೋಹನ್?

ವಿ. ಶ್ರೀನಿವಾಸ ಮೋಹನ್ ಆಂಧ್ರಪ್ರದೇಶದ ವಿಜಯವಾಡದವರು. ಇಂಡಿಯನ್ ಆರ್ಟಿಸ್ಟ್ಸ್ ಕಂಪ್ಯೂಟರ್ ಗ್ರಾಫಿಕ್ಸ್ ಎಂಬ ಸಂಸ್ಥೆಯ ಸಿಇಒ. 1996ರಲ್ಲಿ 'ಇಂಡಿಯನ್' ತಮಿಳು ಸಿನಿಮಾಗೆ ಡಿಜಿಟಲ್ ಕಂಪೋಸಿಂಗ್ ಮಾಡುವ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟರು. 2003ರಲ್ಲಿ ತೆರೆಕಂಡ 'ಮ್ಯಾಜಿಕ್ ಮ್ಯಾಜಿಕ್' 3ಡಿ ಹಿಂದಿ ಸಿನಿಮಾದ 'ವಿಷುಯಲ್ ಎಫೆಕ್ಟ್ಸ್'ನ ಸೂಪರ್‌ವೈಸರ್ ಇವರೇ. ಅದರಲ್ಲಿನ ಕೆಲಸಕ್ಕಾಗಿ ರಾಷ್ಟ್ರಪ್ರಶಸ್ತಿಯೂ ಸಂದಿತು. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅಭಿನಯಿಸಿದ್ದ ಆ ಸಿನಿಮಾ ಒಂದು ರೀತಿ ಶ್ರೀನಿವಾಸ ಮೋಹನ್ ಅವರನ್ನು ಇಡೀ ದೇಶ ತಿರುಗಿ ನೋಡುವಂತೆ ಮಾಡಿತು. ನಿರ್ದೇಶಕ ಶಂಕರ್‌ಗೂ ಇವರಿಗೂ ಮೊದಲಿನಿಂದಲೂ ನಂಟು. 'ಬಾಯ್ಸ್', 'ಜೀನ್ಸ್', 'ಐ', 'ಎಂದಿರನ್' ಹೀಗೆ ಅವರ ಸಿನಿಮಾಗಳಲ್ಲೆಲ್ಲ ಇವರ ತಂತ್ರಜ್ಞಾನದ ಕೈಚಳಕವಿದೆ. ಹಿಂದಿಯ 'ಕ್ರಿಷ್' ಸಿನಿಮಾದ ತಾಂತ್ರಿಕ ಶ್ರೀಮಂತಿಕೆಗೂ ಕಾಣ್ಕೆ ನೀಡಿದ ಈ ತಂತ್ರಜ್ಞ, 'ಬಾಹುಬಲಿ'ಯ ಕೆಲಸದ ಮೂಲಕ ಛಾಪುಮೂಡಿಸಿದರು. '2.0' ವಿಎಫ್‌ಎಕ್ಸ್‌ನ ಹೊಣೆಗಾರಿಕೆ ವಹಿಸಿದ್ದವರು ಇವರೇ.



ದೊಡ್ಡ ಆವರಣದಲ್ಲಿ ರಾಶಿಯಾಗಿ ಬಿದ್ದ ಮೊಬೈಲ್‌ಗಳು ಬೇಕಾದ ಆಕಾರ ತಳೆಯಬಲ್ಲವು. ಅವು ಅಕ್ಷಯ್ ಕುಮಾರ್ ಆದಾಗ ನಮ್ಮಲ್ಲಿ 'ಯಾರೀ ಅಕ್ಷಯ್' ಎಂಬ ಇನ್ನೊಂದು ಪ್ರಶ್ನೆ. ಟವರ್‌ಗಳ ವಿಕಿರಣದ ಅಲೆಗಳು ಹೊಮ್ಮುವ ಕಡೆಯೆಲ್ಲ ಬೃಹತ್ ಪಕ್ಷಿ ಪ್ರವೇಶಿಸಲಾಗದು. ಅದನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲೆಂದೇ ವಿಜ್ಞಾನಿ ವಸೀಗರನ್ ತಂದಿರುವ ಸಂಚಾರಿ ಪ್ರಯೋಗಾಲಯವನ್ನೂ ಪಕ್ಷಿಯ ಪಟ ಪಟ ಬಡಿಯುವ ರೆಕ್ಕೆಗಳಿಂದ ಹೊಮ್ಮುವ ಗಾಳಿಯೇ ಅಲ್ಲಾಡಿಸುತ್ತದೆ. ಅದನ್ನು ಚಿಟ್ಟಿ ಮತ್ತೆ ಮತ್ತೆ ರಕ್ಷಿಸಿದರೆ ನಡುವೆ ರೋಬೊ ಆ್ಯಮಿಯ ಸಾಥ್.

ಶಂಕರ್ ಸಿನಿಮಾಗಳಲ್ಲಿ ಹತಾಶ, ಪರಮ ಪ್ರಾಮಾಣಿಕ ಪಾತ್ರವೊಂದು ಸಿಡಿದೇಳುವ ಒನ್‌ಲೈನರ್‌ಗಳು ಇರುತ್ತವೆ. ಆದರೆ, 'ಎಂದಿರನ್'ನಲ್ಲಿ ಅವರು ಅದನ್ನು ಮೀರಿದ್ದರು. ತಮಾಷೆ, ಚೇಷ್ಟೆ, ತುಂಟತನ, ಆಧುನಿಕ ಕಾಲದ ಮನಸ್ಥಿತಿಗಳ ಲೇವಡಿ ಎಲ್ಲವನ್ನೂ ಬೆರೆಸಿದ ಹೊಸತೇ ರಂಜನೆಯ ಪಾಕವಾಗಿ 'ಎಂದಿರನ್' ('ರೊಬೋ')ಹಿಡಿದಿಟ್ಟಿತ್ತು. ಅದರಲ್ಲಿ ಭಾವುಕ ದೃಶ್ಯಗಳಿಗೂ ಕೊರತೆ ಇರಲಿಲ್ಲ. ಫಳ ಫಳ ಹೊಳೆಯುವ ಐಶ್ವರ್ಯಾ ರೈ ಬಣ್ಣದೆದುರೂ ರಜನೀಕಾಂತ್ ನಡೆ–ನಿಲುವುಗಳು ಗೆದ್ದಿದ್ದವು.

'ರೊಬೋ 2.0' ಎಂಟು ವರ್ಷಗಳ ಹಳೆಯ ಚಿತ್ರದ ಮುಂದುವರಿದ ಭಾಗವೇನೂ ಅಲ್ಲ. ಅದರ ಕವಲು. ಶಂಕರ್ ಇಲ್ಲಿ ಮತ್ತೆ ಹತಾಶ ಪಾತ್ರವೊಂದು ಸೆಟೆದೇಳುವಂತೆ ಮಾಡಿದ್ದಾರೆ. ಇಲ್ಲಿ ಪ್ರತೀಕಾರದ ಉದ್ದೇಶವನ್ನು ಅವರು ಹಾಕಿರುವುದು ಮೃತ ವ್ಯಕ್ತಿಯ, ಪಕ್ಷಿಗಳ ಆತ್ಮಗಳಿಗೆ. ಅವುಗಳೆಲ್ಲ ಸೇರಿ ರೂಪು ತಳೆಯುವುದೇ 'ಫಿಫ್ತ್ ಫೋರ್ಸ್' ಅರ್ಥಾತ್ ಐದನೇ ಶಕ್ತಿ. ಆ ಶಕ್ತಿ ಹಕ್ಕಿಯಾಗುತ್ತದೆ. ಹೆಕ್ಕಿತಂದ ಮೊಬೈಲ್‌ಗಳ ರಾಶಿಯಿಂದ ಬೇಕಾದ ರೂಪ ತಳೆಯುವ ವಿಧ್ವಂಸಕ ಆಕಾರವೂ ಆಗಬಲ್ಲದು. ಮೊಬೈಲ್ ಸಿಗ್ನಲ್‌ಗಳು ಹೊರಸೂಸುವ ವಿಕಿರಣಗಳಿಂದ ಪಕ್ಷಿಸಂಕುಲ ನಾಶವಾಗುತ್ತಿದೆ ಎನ್ನುವುದೇ ಇಂಥ ಘನ ಉದ್ದೇಶಕ್ಕೆ ಕಾರಣ. ಸಂದೇಶವನ್ನು ಜನಪದ ಕಥೆಯ ರೂಪದಲ್ಲಿ ಅರುಹುವ ಶಂಕರ್ ಕ್ರಮಕ್ಕೆ ಈ ಸಿನಿಮಾದಲ್ಲಿ ದೊಡ್ಡ ಮಟ್ಟದ ತಾಂತ್ರಿಕ ವೈಭವ ಸಿಕ್ಕಿದೆ.

ಈ ಕಾರಣಗಳಿಂದಾಗಿಯೇ '2.0' 'ಮೇಕ್–ಇನ್–ಇಂಡಿಯಾ' ಸಿನಿಮಾ. ಬರೀ ತಂತ್ರಜ್ಞಾನದಿಂದಲ್ಲ; ಜಾಯಮಾನದಿಂದಲೂ.

'ವಿಎಫ್‌ಎಕ್ಸ್' ಎನ್ನುವುದು ವಿಷುಯಲ್ ಎಫೆಕ್ಟ್ಸ್‌ನ ಸಂಕ್ಷಿಪ್ತ ರೂಪ. '2.0' ಈ ಕೆಲಸ ಹಾಗೂ 3ಡಿ ದೃಶ್ಯ ವೈಭವದಿಂದ ಗಮನ ಸೆಳೆದಿದೆ. ಸಾಮಾನ್ಯವಾಗಿ '2ಡಿ'ಯಲ್ಲಿ ಚಿತ್ರೀಕರಣ ನಡೆಸಿ, ಅದನ್ನು '3ಡಿ'ಗೆ ಪರಿವರ್ತಿಸುವುದು ಭಾರತೀಯ ಸಿನಿಮಾಗಳಲ್ಲಿ ರೂಢಿಯಲ್ಲಿರುವ ತಂತ್ರ. ಆದರೆ, '2.0'ನಲ್ಲಿ ಚಿತ್ರೀಕರಣವನ್ನೇ '3ಡಿ' ತಂತ್ರಜ್ಞಾನ ಬಳಸಿ ಮಾಡಲಾಗಿದೆ. ಹಿಂದಿಯ 'ಧೂಮ್', ತಮಿಳಿನ 'ಪೋಕಿರಿ' ಸಿನಿಮಾಗಳ ಸಿನಿಮಾಟೊಗ್ರಫರ್ ಆಗಿ ಜನಮನ ಗೆದ್ದ ನೀರವ್ ಶಾ ಅವರನ್ನು ಶಂಕರ್ ಈ ಸಿನಿಮಾಗೆ ಆಯ್ದುಕೊಂಡದ್ದೇ ಅವರ ತಾಂತ್ರಿಕ ಜಾಣ್ಮೆ ಕಂಡು. ನಲವತ್ತನಾಲ್ಕು ವಯಸ್ಸಿನ ನೀರವ್ ಜಾಹೀರಾತುಗಳಿಗೂ ಕೆಲಸ ಮಾಡಿದ್ದು, ಬದಲಾದ ತಂತ್ರಜ್ಞಾನವನ್ನು ಭಾರತೀಯತೆಗೆ ಒಗ್ಗಿಸಿಕೊಳ್ಳುವುದರಲ್ಲಿ ಪಳಗಿದವರು.

ಲೈಕಾ ಪ್ರೊಡಕ್ಷನ್ಸ್‌ನ ಸಿಒಒ ರಾಜು ಮಹಾಲಿಂಗಂ ಕೂಡ ಭಾರತೀಯ ಮಣ್ಣಿನ ಸಿನಿಮಾಗಳಿಗೂ ಹಣ ಹೂಡುತ್ತಾ ಬಂದವರು. ಹಾಗೆ ನೋಡಿದರೆ ಈ ಕಂಪನಿ ಬ್ರಿಟನ್ ಮೂಲದ್ದು. '2.0' ಸಿನಿಮಾವನ್ನು ಈ ನೆಲದಲ್ಲಿಯೇ ಪೂರ್ಣವಾಗಿ ಚಿತ್ರಿಸಬೇಕು ಎನ್ನುವ ಹಟ ಅವರಿಗೆ ಇತ್ತು.

ಇಂಥ ಆಲೋಚನೆಗಳಿಗೆ ರೆಕ್ಕೆಪುಕ್ಕ ಹಚ್ಚಿದ್ದು ತೆಲುಗಿನ 'ಬಾಹುಬಲಿ' ಸಿನಿಮಾ. ರಾಜಮೌಳಿ ಅಂಥದ್ದೊಂದು ಪಂಕ್ತಿಯನ್ನು ಭಾರತೀಯ ಸಿನಿಮಾದಲ್ಲಿ ಹಾಕಿಕೊಟ್ಟಿದ್ದಾರೆ. ದಕ್ಷಿಣ ಭಾರತದ ದೊಡ್ಡ ಸಿನಿಮಾಗಳ ಸರಾಸರಿ ಬಜೆಟ್ ಕೆಲವೇ ವರ್ಷಗಳ ಹಿಂದೆ 50 ಕೋಟಿ ರೂಪಾಯಿ ಇತ್ತು. ಈಗ ಅದು ಹಿಗ್ಗಲು ಇಂಧನವಾದದ್ದು 'ಬಾಹುಬಲಿ'ಯ ಯಶಸ್ಸು.

ಎಂಟು ವರ್ಷಗಳ ಹಿಂದೆ 'ರೋಬೊ'ದಲ್ಲಿಯೂ ಶಂಕರ್ ಗ್ರಾಫಿಕ್ಸ್ ಅನ್ನು ಅರ್ಥವತ್ತಾಗಿ ಬಳಸಿದ್ದರು. ಆದರೆ, '2.0' ಅದಕ್ಕಿಂತ ಹೆಚ್ಚಿನ ವಿಷುಯಲ್ ಎಫೆಕ್ಟ್ಸ್ ಬೇಡಿದೆ.

ಮೊದಲಿಗೆ ಶಂಕರ್ ಚಿತ್ರಕಥೆ ಸಿದ್ಧಪಡಿಸಿದರು. ಅದಕ್ಕೆ ಅಗತ್ಯವಿರುವ ದೃಶ್ಯ ಹಾಗೂ ಗ್ರಾಫಿಕ್ಸ್ ಸೃಷ್ಟಿಸಬೇಕಾದ ತಂಡದವರ ಜತೆ ಚರ್ಚಿಸಿದರು. 1996ರಿಂದ ಭಾರತೀಯ ಚಿತ್ರರಂಗದಲ್ಲಿ ವಿಷುಯಲ್ ಎಫೆಕ್ಟ್ಸ್ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಾ ಬಂದಿರುವ ವಿ. ಶ್ರೀನಿವಾಸ್ ಮೋಹನ್ ಅವರಿಗೆ ಇಡೀ ವಿಎಫ್‌ಎಕ್ಸ್‌ನ ಉಸ್ತುವಾರಿ ವಹಿಸಲಾಯಿತು. 'ಬಾಹುಬಲಿ'ಯ ಕರಾಮತ್ತಿನಲ್ಲಿ ಇದ್ದುದೂ ಅವರದ್ದೇ ಕೈಚಳಕ.

ಸುಮಾರು ₹ 543 ಕೋಟಿ ವೆಚ್ಚದ ಇಂಥ ಸಿನಿಮಾ ಮಾಡಲು ಕೈಹಾಕಿದಾಗ ಮಾರುಕಟ್ಟೆಯ ಲೆಕ್ಕಾಚಾರಗಳೂ ಪಕ್ಕಾ ಇರಬೇಕಾಗುತ್ತದೆ. ಶಂಕರ್ ಅದಕ್ಕೇ ಉತ್ತರ ಹಾಗೂ ದಕ್ಷಿಣ ಭಾರತದ ಧ್ರುವೀಕರಣವನ್ನು ಪಾತ್ರಗಳ ಆಯ್ಕೆಯಲ್ಲೇ ಮಾಡಿದರು. ರಜನೀಕಾಂತ್‌ಗೆ ದಕ್ಷಿಣದಲ್ಲಿ ದೊಡ್ಡ